## ಅಭ್ಯಾಸ-ವೈರಾಗ್ಯ

ಅಭ್ಯಾಸ ಮತ್ತು ವೈರಾಗ್ಯಗಳು ಯೋಗಕ್ಕೆ ಮುಖ್ಯ ಎಂದು ಹೇಳಿದ್ದಾಯಿತು. ಸ್ಥಿತಿ ಅಥವಾ ಸ್ತಿಮಿತವನ್ನು ಪಡೆಯುವ ಪ್ರಯತ್ನವೇ ಅಭ್ಯಾಸ. **ದೃಷ್ಟಾನುಶ್ರವಿಕ ವಿಷಯವಿತೃಷ್ಣಸ್ಯ ವಶೀಕಾರ ಸಂಜ್ಞಾ ವೈರಾಗ್ಯಮ್" (೧-೧೫)** – ಕಣ್ಣಿಗೆ ಕಾಣುವ ಹಾಗೂ ಕಾಣದಿರುವ ವಿಷಯಗಳಲ್ಲಿ ಆಸಕ್ತಿಯು ಹೋಗುವುದೇ 'ವಶೀಕಾರ' ವೆಂಬ ವೈರಾಗ್ಯ. ಆತ್ಮಜ್ಞಾನವಾದ ಮೇಲೆ ಯೋಗಿಗೆ ಗುಣಗಳ ವಿಷಯದಲ್ಲಿ ತೀವ್ರ ವೈರಾಗ್ಯವುಂಟಾಗುತ್ತದೆ. ಅದೇ 'ಪರಮವೈರಾಗ್ಯ.' **ಜ್ಞಾನಸ್ಯೈವ ಪರಾಕಾಷ್ಠಾ ವೈರಾಗ್ಯಮ್** – ಜ್ಞಾನದ ಪರಾಕಾಷ್ಠೆಯೇ ವೈರಾಗ್ಯ (ವ್ಯಾಸಭಾಷ್ಯ). ಕೈವಲ್ಯಕ್ಕೆ ಇದು ಬಹು ಮುಖ್ಯ. ಹೀಗೆ ವೈರಾಗ್ಯಶಾಲಿಯಾಗಿ ಚಿತ್ತವೃತ್ತಿಗಳನ್ನು ನಿರೋಧ ಮಾಡಿದ ಯೋಗಿಗೆ 'ಸಮಾಧಿ'ಯುಂಟಾಗುತ್ತದೆ.

## ಸಮಾಧಿ

ಸಮಾಧಿಯಲ್ಲಿ ಎರಡು ಬಗೆ: **ಸಂಪ್ರಜ್ಞಾತ** ಮತ್ತು **ಅಸಂಪ್ರಜ್ಞಾತ**. ಇದನ್ನೇ ಸವಿಕಲ್ಪ, ನಿರ್ವಿಕಲ್ಪ ಎಂದೂ ಹೇಳುತ್ತಾರೆ. ಸವಿಕಲ್ಪ ಸಮಾಧಿಯಲ್ಲಿ ಪ್ರಜ್ಞೆಯು ದೇಶಕಾಲಗಳಿಂದ ನಿಯಂತ್ರಿಸಲ್ಪಡುತ್ತದೆ. ಆದರೆ ನಿರ್ವಿಕಲ್ಪ ಸಮಾಧಿಯಲ್ಲಿ ಪ್ರಜ್ಞೆಯು ಅನಿಯಂತ್ರಿತವಾಗಿ ಮಾನಸಿಕ ವ್ಯಾಪಾರಗಳೆಲ್ಲವೂ ಸ್ಥಗಿತಗೊಳ್ಳುತ್ತವೆ. ರಮಣ ಮಹರ್ಷಿಗಳು ಈ ಎರಡೂ ಬಗೆಯ ಸಮಾಧಿಗಳಲ್ಲೂ ಆರು ಸ್ತರಗಳಿವೆ ಎನ್ನುತ್ತಾರೆ. ಪತಂಜಲಿಗಳು ಈ ಎರಡೂ ಸ್ಥಿತಿಗಳನ್ನು 'ಸಬೀಜ', 'ನಿರ್ಬೀಜ' ಸಮಾಧಿ ಎಂದು ಹೆಸರಿಸುತ್ತಾರೆ. ಕರ್ಮದ ಬೀಜವು ದ್ವೈತಭಾವವನ್ನು ಉಳಿಸಿಕೊಂಡು ಬರುವುದೇ 'ಸಬೀಜ'. ದ್ವಂದ್ವವೆಲ್ಲಾ ಅಳಿದು ಪೂರ್ಣ ಅದ್ವೈತಭಾವವೇ ಇರುವ ಸ್ಥಿತಿ 'ನಿರ್ಬೀಜ'.

## ಸಂಪ್ರಜ್ಞಾತ-ಅಸಂಪ್ರಜ್ಞಾತ ಸಮಾಧಿ

ಸಂಪ್ರಜ್ಞಾತ ಸಮಾಧಿಯಲ್ಲಿ ನಾಲ್ಕು ಹಂತಗಳಲ್ಲಿ ಅನುಭವವು ವ್ಯಕ್ತಗೊಳ್ಳುತ್ತದೆ :

೧. **ಸವಿತರ್ಕ:** ಚಿತ್ತವು ಒಂದು ವಿಷಯದಲ್ಲಿ ನಿಂತಿರುವಾಗ ಉತ್ಪನ್ನವಾಗುವ ಸ್ಥೂಲಜ್ಞಾನವೇ ಸವಿತರ್ಕ. ಈ ಅವಸ್ಥೆಯಲ್ಲಿ ಯೋಗಿಗೆ ಭೂತ-ಭವಿಷ್ಯತ್ತು ಮತ್ತು ವರ್ತಮಾನಗಳ ಅರಿವು ಇರುತ್ತದೆ.

೨. **ಸವಿಚಾರ:** ವಸ್ತುಗಳ ಸೂಕ್ಷ್ಮಜ್ಞಾನವೇ ಸವಿಚಾರ. ಈ ಅವಸ್ಥೆಯಲ್ಲಿ ಪ್ರಕೃತಿ, ಮಹತ್, ಅಹಂಕಾರ, ಪಂಚ ತನ್ಮಾತ್ರೆಗಳೆಂಬ ಸೂಕ್ಷ್ಮತತ್ತ್ವಗಳ ಅನುಭವ ಯೋಗಿಗೆ ಆಗುತ್ತದೆ.

೩. **ಸಾನಂದ:** ಆನಂದಮಾತ್ರವಿರುವ ಸ್ಥಿತಿ. ಇಲ್ಲಿ ಯೋಗಿ ದಿವ್ಯಾನಂದ ಮತ್ತು ಶಾಂತಿಯನ್ನು ಅನುಭವಿಸುತ್ತಾನೆ.

೪. **ಅಸ್ಮಿತಾ :** ಗ್ರಹಿಸುವವನೇ ವಿಷಯವಾಗಿರುವ ಸ್ಥಿತಿ. ಇಲ್ಲಿ ಯೋಗಿಯು ಪರಿಶುದ್ಧವಾದ ಅಸ್ಮಿತೆಯ ( "ನಾನು, ನಾನು" ಎಂಬ ವ್ಯಕ್ತಿತ್ವದ ಮೂಲಭಾವನೆಯ) ಪ್ರತ್ಯಕ್ಷಾನುಭವವನ್ನು ಪಡೆಯುತ್ತಾನೆ.

ನಾಲ್ಕು ಅಂಗಗಳಿಂದ ಕೂಡಿರುವ ಸಂಪ್ರಜ್ಞಾತ ಸಮಾಧಿಯಿಂದ ನಾಲ್ಕು ಸಿದ್ಧಿಗಳುಂಟಾಗುತ್ತವೆ. ಮೊದಲನೆಯದೇ 'ಮಧುಮತಿ'. ಈ ಸ್ಥಿತಿಯಲ್ಲಿ ಯೋಗಿಯು ಅತ್ಯಂತ ಸುಖಿಯಾಗಿರುತ್ತಾನೆ. ಸತ್ವಗುಣದ ಸುಖದಲ್ಲಿ ನೆಲೆಸಿರುವ ಈ ಸ್ಥಿತಿಯನ್ನು 'ಋತಂಭರಾ' ಎಂದೂ ಕರೆಯುವರು. ಎರಡನೆಯ ಸಿದ್ಧಿಗೆ 'ಮಧುಪ್ರತೀಕ'ವೆಂದು ಹೆಸರು. ಈ ಅವಸ್ಥೆಯಲ್ಲಿ ಚಿತ್ತಕ್ಕೆ ವಿಶೇಷ ಶಕ್ತಿಗಳುಂಟಾಗುತ್ತವೆ. ಮೂರನೆಯ ಸಿದ್ಧಿಯೇ 'ವಿಶೋಕ'. 'ಅತಿಕ್ರಾಂತಭುವನೀಯ' ಎಂಬುದು ನಾಲ್ಕನೆಯದು. ಈ ಅವಸ್ಥೆಯಲ್ಲಿ ಯೋಗಿಯು ಸಮಸ್ತ ಅನುಭವಗಳನ್ನೂ ದಾಟಿ ಆತ್ಮವು ಭೌತಿಕ ವಸ್ತುಗಳಿಗಿಂತ ಬೇರೆಯಾದದ್ದೆಂದು ತಿಳಿಯುತ್ತಾನೆ. ಈ ಸಮಾಧಿಗೆ 'ಧರ್ಮಮೇಘ' ಎಂದು ಹೆಸರು. ಈ ಹಂತಕ್ಕೆ ತಲುಪಿರುವ ಯೋಗಿಯೇ ಸ್ಥಿತಪ್ರಜ್ಞ; ಇವನ ಲಕ್ಷಣಗಳನ್ನೇ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿರುವುದು. ಈ ನಾಲ್ಕೂ ಬಗೆಯ ಸಮಾಧಿಗಳು ಆಲಂಬನದಿಂದ ಕೂಡಿರುವುದರಿಂದ ಅವುಗಳಿಗೆ 'ಸಂಪ್ರಜ್ಞಾತ' ವೆಂದು ಹೆಸರು

ಅಸಂಪ್ರಜ್ಞಾತ ಸಮಾಧಿಯು ಎರಡು ಬಗೆ: **ಭವಪ್ರತ್ಯಯ** ಮತ್ತು **ಉಪಾಯಪ್ರತ್ಯಯ**. ಈ ಸಮಾಧಿಯ ಕಟ್ಟಕಡೆಯ ಹಂತದಲ್ಲಿ ಸಂಸ್ಕಾರಗಳೆಲ್ಲವೂ ನಾಶವಾಗಿ ಪ್ರಾರಬ್ಧಕರ್ಮವು ಶಕ್ತಿಹೀನವಾಗುತ್ತದೆ. ಹೀಗೆ ಚಿತ್ತವೃತ್ತಿಗಳೆಲ್ಲ ನಾಶವಾದ ಮೇಲೆ ಚಿತ್ತವು 'ಮೂಲಕಾರಣ' ದಲ್ಲಿ ಲಯವಾಗುತ್ತದೆ. ಇದನ್ನೇ 'ಸ್ವರಾಜ್ಯಸಿದ್ಧಿ' ಎನ್ನುತ್ತಾರೆ. ಇದು ಯೋಗದ ಅತ್ಯುನ್ನತ ಸ್ಥಿತಿ. ಇದನ್ನೇ ಬೌದ್ಧರು 'ಶೂನ್ಯಸ್ಥಿತಿ' ಎಂದೂ, ಕ್ರಿಶ್ಚಿಯನ್ನರು 'ರಹಸ್ಯ ಪರಮಾನಂದ' ವೆಂದೂ ಮತ್ತು ಸೂಫಿ ಪಂಥದವರು 'ಬಾಕಾ' ಎಂದೂ ಕರೆಯುತ್ತಾರೆ. ವಿಜ್ಞಾನಭಿಕ್ಷು ಮತ್ತು ಶ್ರೀಅರವಿಂದರು ಈ ಸ್ಥಿತಿಯನ್ನೇ 'ಸಮಾಪತ್ತಿ' ಎಂದು ಕರೆದಿದ್ದಾರೆ.

## ಈಶ್ವರಪ್ರಣಿಧಾನ

**'ಈಶ್ವರಪ್ರಣಿಧಾನಾದ್ವಾ'** (೧-೧೩) – ಸಮಾಧಿಯನ್ನು ಹೊಂದಲು 'ಈಶ್ವರಪ್ರಣಿಧಾನ'ವೂ ಕಾರಣವೆಂಬುದು ಪತಂಜಲಿಗಳ ಅಭಿಪ್ರಾಯ. ಈಶ್ವರಪ್ರಣಿಧಾನ ಎಂದರೆ ಭಗವಂತನಲ್ಲಿ ಭಕ್ತಿ. ಇದೇ ಪತಂಜಲಿಗಳು ಉಪದೇಶಿಸಿರುವ ಭಕ್ತಿಯೋಗ. **"ಮೋಕ್ಷಕಾರಣ ಸಾಮಗ್ರ್ಯಾಂ ಭಕ್ತಿರೇವ ಗರೀಯಸೀ"** – ಮೋಕ್ಷಕ್ಕೆ ಕಾರಣವಾಗುವ ಸಂಗತಿಗಳಲ್ಲಿ ಭಕ್ತಿಯೇ ಹೆಚ್ಚಿನದು ಎಂಬ ಆಚಾರ್ಯ ಶಂಕರರ ಮಾತು ಇಲ್ಲಿ ಮನನೀಯ. ಸಮಾಧಿಪಥದಲ್ಲಿ ಬರುವ ವಿಘ್ನಗಳೆಲ್ಲವೂ ಈಶ್ವರಪ್ರಣಿಧಾನದಿಂದ ನಿವಾರಣೆಯಾಗುತ್ತವೆ.

ಯೋಗದ ಪ್ರಕಾರ ಈಶ್ವರ ಎಂದರೆ ಯಾರು? ಕ್ಲೇಶ, ಕರ್ಮ, ಫಲ, ಆಶಯ (ಸಂಸ್ಕಾರ) ಇವುಗಳಿಂದ ಬಾಧಿತನಾಗದಿರುವ ಪುರುಷನೇ ಈಶ್ವರ. ಇವನಿಗೆ ಸಮಾನರಾದವರು ಯಾರೂ ಇಲ್ಲ.

(ಮುಂದುವರಿಯುವುದು)

**ವಿವೇಕಪ್ರಭದ ಎಲ್ಲಾ ಸಂಚಿಕೆಗಳನ್ನು ಇಂಟರ್‌ನೆಟ್‌ನಲ್ಲಿ ನೀವು ಓದಬಹುದು. ಅದಲ್ಲದೆ, ಲೇಖಕರು, ಶೀರ್ಷಿಕೆ, ವರ್ಷ ಮತ್ತು ತಿಂಗಳುಗಳ ಆಧಾರದ ಮೇಲೆ ನಿಮಗೆ ಬೇಕಾದ ಲೇಖನವನ್ನು ಹುಡುಕಬಹುದು. ಅದಕ್ಕಾಗಿ ಈ ವೆಬ್‌ಸೈಟ್ ಅನ್ನು ದಯವಿಟ್ಟು ಸಂದರ್ಶಿಸಿ:**

**vivekaprabha.net**




**ವೇದಗಳ ಜ್ಞಾನಕಾಂಡವನ್ನೇ ಪ್ರಧಾನವಾಗಿ ಇಟ್ಟುಕೊಂಡ ಪೂರ್ವಮೀಮಾಂಸಾ ದರ್ಶನವು ಅತ್ಯಂತ ಬೃಹತ್ತಾದುದು. ಅದನ್ನು ವಿದ್ವತ್ಪೂರ್ಣವಾಗಿ ಪರಿಚಯಿಸಿಕೊಟ್ಟಿರುವ ಮಾನ್ಯ ಲೇಖಕರು ಮೈಸೂರಿನ ಮಹರ್ಷಿ ಪತಂಜಲಿ ಧ್ಯಾನಕೇಂದ್ರದ ಸಂಸ್ಥಾಪಕರು, ವೇದವಾಙ್ಮಯದಲ್ಲಿ ನುರಿತವರು.**

**ಭಾ**ರತೀಯ ದರ್ಶನವಾಙ್ಮಯದ ಆರೂ ದರ್ಶನಗಳು ವೇದವನ್ನು ಪುರಸ್ಕರಿಸುತ್ತವೆ. ಆದರೂ, ಪೂರ್ವಮೀಮಾಂಸಾ ಹಾಗೂ ಉತ್ತರಮೀಮಾಂಸಾ ದರ್ಶನಗಳು ವೇದಗಳಲ್ಲಿ ಹೇಳಿರುವ ಕರ್ಮಕಾಂಡ ಹಾಗೂ ಜ್ಞಾನಕಾಂಡಗಳಿಗೆ ನೇರವಾಗಿ ಸಂಬಂಧಿಸಿವೆ. ಅದರಲ್ಲೂ ಪೂರ್ವಮೀಮಾಂಸಾ ದರ್ಶನವು ವೇದಗಳಲ್ಲಿ ಹೇಳಿರುವ ಕರ್ಮಕಾಂಡವನ್ನು ಪ್ರಯೋಗಾತ್ಮಕವಾಗಿ ಹೇಗೆ ಅನುಷ್ಠಾನಕ್ಕೆ ತರಬೇಕೆಂದು ಸೂತ್ರಗಳ ಮೂಲಕ ಸವಿಸ್ತಾರವಾಗಿ ಸ್ಪಷ್ಟಪಡಿಸುತ್ತದೆ.

ಸಾಂಪ್ರದಾಯಿಕ ವೈದಿಕ ಪರಂಪರೆಯನ್ನು ಜೀವನದಲ್ಲಿ ಅಳವಡಿಸಿಕೊಂಡು ಬರುತ್ತಿರುವವರಲ್ಲಿ ಕರ್ಮಮಾರ್ಗಿಗಳು ಹಾಗೂ ಜ್ಞಾನಮಾರ್ಗಿಗಳೆಂದು ಸ್ಥೂಲವಾಗಿ ಎರಡು ಪ್ರಭೇದಗಳಿವೆ. ಜ್ಞಾನಮಾರ್ಗಾವಲಂಬಿ ವೈದಿಕರಾದ ಅಷ್ಟಾವಕ್ರ, ಗೌಡಪಾದಾಚಾರ್ಯ, ಗೋವಿಂದ ಭಗವತ್ಪಾದರು, ಶ್ರೀಮತ್ ಆದಿ ಶಂಕರಾಚಾರ್ಯ, ಶ್ರೀರಮಣ ಮಹರ್ಷಿ ಇತ್ಯಾದಿ ಮಹಾತ್ಮರು ಮೋಕ್ಷಕ್ಕೆ ಜ್ಞಾನವೊಂದೇ ಸಾಕು; ಪಾರಮಾರ್ಥಿಕ ಸ್ವರೂಪಜ್ಞಾನವನ್ನು ಪಡೆಯಲು ಕರ್ಮದ ಹಂಗಿಲ್ಲ; ಕರ್ಮವನ್ನು ಅವಲಂಬಿಸಿ ಜ್ಞಾನವನ್ನು ಪಡೆಯಬೇಕಾಗಿಲ್ಲ; ಸ್ವರೂಪಜ್ಞಾನವು ಸ್ವತಃಸಿದ್ಧ ಎಂಬುದಾಗಿ ಕರ್ಮದ ಮಹತ್ವವನ್ನು ನಿರಾಕರಿಸುತ್ತಾರೆ. ಆದರೆ ಈ ಜ್ಞಾನಪಕ್ಷಪಾತಿಗಳ ಎಲ್ಲ ಸಿದ್ಧಾಂತಗಳನ್ನು ಪೂರ್ವಮೀಮಾಂಸಾ ದರ್ಶನವು ಅತ್ಯಂತ ಪ್ರಬಲವಾದ ಆಕ್ಷೇಪಗಳೊಡನೆ ನಿರಾಕರಿಸುತ್ತದೆ. ಈ ಆಕ್ಷೇಪಗಳು ಏನೆಂದು ನಾವು ಮನಗಾಣಲು ಹೊರಟಾಗ ಪೂರ್ವಮೀಮಾಂಸಾ ದರ್ಶನದ ಮೂಲ ಪ್ರವರ್ತಕರಾದ ಮಹರ್ಷಿ ಜೈಮಿನಿಯ ಸೂತ್ರಗಳನ್ನು ಅಧ್ಯಯನ ಮಾಡಬೇಕಾಗುತ್ತದೆ.

### ಪೂರ್ವಮೀಮಾಂಸಾ ದರ್ಶನದ ವ್ಯಾಪ್ತಿ

ಪೂರ್ವಮೀಮಾಂಸಾ ದರ್ಶನದಲ್ಲಿ ಒಟ್ಟು ೨೭೩೬ ಸೂತ್ರಗಳು ಇವೆ. ಪೂರ್ವಮೀಮಾಂಸಾ ದರ್ಶನವು **ಅಥಾತೋ ಧರ್ಮಜಿಜ್ಞಾಸಾ** ಎಂಬ ಸೂತ್ರದಿಂದ ಪ್ರಾರಂಭವಾಗಿ **ಅನ್ವಾಹಾರ್ಯೇ ಚ ದರ್ಶನಾತ್** ಎಂಬ ಸೂತ್ರದೊಡನೆ ಸಮಾಪ್ತವಾಗುತ್ತದೆ. ಷಡ್ ದರ್ಶನಗಳಲ್ಲಿಯೇ ಪೂರ್ವಮೀಮಾಂಸಾ ದರ್ಶನವು ಅತ್ಯಂತ ಬೃಹತ್ತಾದುದು. ಉಳಿದ ಐದೂ ದರ್ಶನಗಳು ಒಂದು ಭಾಗವಾದರೆ, ಅದಕ್ಕೆ ಸಮವಾಗಿ ಇದೊಂದೇ ದರ್ಶನವು ಒಂದು ಭಾಗವಾಗುತ್ತದೆ. 'ತ್ರಯೀ' ಎಂದು ಕರೆಸಿಕೊಳ್ಳುವ ಋಕ್, ಸಾಮ, ಯಜುರ್ವೇದಗಳಲ್ಲಿ ಜ್ಞಾನಕ್ಕಿಂತ ಕರ್ಮಕ್ಕೇ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವುದರಿಂದ ಪೂರ್ವಮೀಮಾಂಸಾ ದರ್ಶನವು ಇಷ್ಟು ದೊಡ್ಡದಾಗಿ ಬೆಳೆದುನಿಂತಿತು.

ಪೂರ್ವಮೀಮಾಂಸಾ ದರ್ಶನವನ್ನು **ಕರ್ಮಮೀಮಾಂಸಾ** ಹಾಗೂ **ಧರ್ಮಮೀಮಾಂಸಾ** ಎಂಬ ಎರಡು ಹೆಸರುಗಳಿಂದ ಕರೆಯುತ್ತಾರೆ. ಈ ದರ್ಶನದ ಮೊದಲನೆಯ ಸೂತ್ರವಾದ **'ಅಥಾತೋ ಧರ್ಮ ಜಿಜ್ಞಾಸಾ'** ಎಂಬ ಸೂತ್ರದ ಮೂಲಕ ಮಹರ್ಷಿ ಜೈಮಿನಿ, ಮನುಷ್ಯನು ತಾನು ಮಾಡುವ ಕರ್ಮಗಳಿಂದಾಗಿಯೇ ಧರ್ಮವೋ, ಅಧರ್ಮವೋ ಜರುಗುವುದರಿಂದ ಅತಿ ಮುಖ್ಯವಾಗಿ ಕರ್ಮನಿಯಂತ್ರಣದಿಂದಲೇ ಧರ್ಮ ಸಂಸ್ಥಾಪನೆಯು ಸಾಧ್ಯ ಎಂದು ಅಭಿಪ್ರಾಯಪಡುತ್ತಾರೆ. ಒಬ್ಬ ವ್ಯಕ್ತಿಯು ತನ್ನ ಆಜೀವಪರ್ಯಂತದ ನಡವಳಿಕೆಗಳಲ್ಲಿ ಜ್ಞಾನಕ್ಕಿಂತಲೂ ಹೆಚ್ಚಾಗಿ ವೃತ್ತಿಪರನಾಗಿ ಅಥವಾ ಕರ್ಮಜೀವಿಯಾಗಿರುತ್ತಾನೆ. ಆದ್ದರಿಂದ ಫಲಗಳನ್ನು ಉದ್ದೇಶವಾಗಿ ಇರಿಸಿಕೊಂಡಿರುವಂಥ ಯಥೋಚಿತ ಕರ್ಮಗಳನ್ನು ಮಾಡಿಯೇ ತೀರುತ್ತಾನೆ. ಹೀಗಾಗಿ ಅವನ ಸ್ವಾರ್ಥಪರತೆ, ಮಹತ್ವಾಕಾಂಕ್ಷೆ, ಲೋಭಾದಿಗಳನ್ನು ಪೂರೈಸಿಕೊಳ್ಳಲು ನಿಂದನೀಯ ಕರ್ಮಗಳನ್ನು ಒಂದು ತರಹದ ಅವಜ್ಞೆಯೊಡನೆ ಮಾಡುತ್ತಾಹೋಗುತ್ತಾನೆ. ಅವನಲ್ಲಿ ಜ್ಞಾನವು ಇದ್ದರೂ ಸಹ ಆ ಜ್ಞಾನವು ಪರೋಕ್ಷವಾಗಿ ಅವನ ಮಹತ್ವಾಕಾಂಕ್ಷೆಯನ್ನೇ ಬೆಂಬಲಿಸುವುದರಿಂದ ನಿಂದ್ಯ ಕರ್ಮಗಳೇ ಪ್ರಧಾನರೂಪದಿಂದ ಜರುಗುತ್ತವೆ. ಇದರಿಂದ ಅವನು ಅನಿವಾರ್ಯವಾಗಿ ಪಾಪಿಯಾಗಿ ನರಕಕ್ಕೆ ಹೋಗುತ್ತಾನೆ. ಮಹರ್ಷಿ ಜೈಮಿನಿಯ ಪ್ರಕಾರ ಕರ್ಮವೆನ್ನುವುದು ಕಾಯಾ, ವಾಚಾ, ಮನಸಾ ಜರುಗುವಂಥದ್ದು. ಯಾವುದೇ ಕರ್ಮಕ್ಕೆ ಪ್ರೇರಣೆಯು ಅಂತಃಕರಣದಲ್ಲಿ ಉಂಟಾಗುತ್ತದೆ. ಈ ರೀತಿ ಕರ್ಮದ ಜನ್ಮಸ್ಥಾನ ಮನುಷ್ಯನ ಮನಸ್ಸೇ ಆಗಿದೆ. ಹೀಗೆ ಮನಸ್ಸಿನಲ್ಲಿ ಪ್ರೇರಿತವಾದ ಕರ್ಮವು ಅವನ ಮಾತಿನ ಮೂಲಕ, ಸಂದರ್ಭಾನುಸಾರವಾಗಿ,

ಸನ್ನಿವೇಶಗಳನ್ನು ಅವಲಂಬಿಸಿ ಪ್ರಕಟಗೊಳ್ಳಬಹುದು ಅಥವಾ ಮೌನವಾಗಿ ಇದ್ದುಕೊಂಡೇ ನಿರ್ವಹಣೆಗೆ ಎಡೆಮಾಡಿಕೊಡಬಹುದು. ಆದ್ದರಿಂದ ಮಾತು ಅಥವಾ ಮಾತಿನ ಜೊತೆಗೆ ಮೌನವೂ ಸಹ ಕರ್ಮಸೂಚಕವೇ. ಇನ್ನು ಶಾರೀರಿಕವಾಗಿ ಐದು ಕರ್ಮೇಂದ್ರಿಯಗಳು ಪ್ರಸಿದ್ಧವಾಗಿಯೇ ಇವೆ. ಕರ್ಮವು ಈ ಭೌತಿಕ ಅಂಗಗಳಿಂದಲೇ ಪ್ರಾರಂಭಗೊಂಡಂತೆ ಕಾಣುತ್ತದೆ. ಆದರೆ ನಿಜವಾಗಿಯೂ ಕರ್ಮವು ಪ್ರಾರಂಭವಾಗುವುದು ಕರ್ಮೇಂದ್ರಿಯಗಳಿಂದ ಅಲ್ಲ, ಮನಸ್ಸಿನಿಂದ.

ವೇದವಾಙ್ಮಯದಲ್ಲಿ ವಿಹಿತಕರ್ಮಗಳಿಗೆ ವಿಹಿತಜ್ಞಾನಕ್ಕಿಂತಲೂ ಕಡಮೆ ಪ್ರಾಶಸ್ತ್ಯವಿರುವಂತೆ ಕಂಡುಬರುತ್ತದೆ. ಆದರೂ ವಾಸ್ತವ ಜೀವನದಲ್ಲಿ ಕರ್ಮದಿಂದ ಜ್ಞಾನ ಹುಟ್ಟುವ ಸಂದರ್ಭಗಳೇ ಹೆಚ್ಚು. ಕರ್ಮದಿಂದ ಹುಟ್ಟಿದಂಥ ಜ್ಞಾನವು ಆ ಕರ್ಮ ಮಾಡಿದವನ ಮಟ್ಟಿಗೆ ಸ್ವಂತದ ಅನುಭವವೇ ಆಗಿಬಿಡುವುದರಿಂದ ಹೆಚ್ಚು ವಿಶ್ವಸನೀಯವಾದದ್ದು. ಉದಾಹರಣೆಗೆ ಒಬ್ಬ ಮನುಷ್ಯನಿಗೆ ಅಕ್ಕಿಯಿಂದ ಅನ್ನವನ್ನು ಹೇಗೆ ಮಾಡಬೇಕು ಎಂಬ ಜ್ಞಾನದ ಆವಶ್ಯಕತೆ ಇದೆ ಎಂದು ಇಟ್ಟುಕೊಳ್ಳೋಣ. ಆಗ ಅವನು ಯಾವುದೋ ಅಂಗಡಿಯಿಂದ ಅಕ್ಕಿಯನ್ನು ತಂದು, ಆ ಒಂದು ಸೇರು ಅಕ್ಕಿಗೆ ಅದೆಷ್ಟೋ ನೀರನ್ನು ಹಾಕಿ ಅನ್ನ ಮಾಡಿದಾಗ, ಆ ಅನ್ನವು ಮುದ್ದೆಯೋ, ಗಂಜಿಯೋ ಆಗಿಬಿಡುತ್ತದೆ. ಎರಡನೆಯ ಪ್ರಯತ್ನದಲ್ಲಿ ಮೊದಲಿಗಿಂತ ಕಡಮೆ ನೀರನ್ನು ಉಪಯೋಗಿಸಿ ಅನ್ನವನ್ನು ಮಾಡಿದಾಗ, ನೀರು ಕಡಮೆಯಾದ್ದರಿಂದ ಅನ್ನವು ಮಂತ್ರಾಕ್ಷತೆಯಂತೆ ಮುಗುಳಕ್ಕಿಯಾಗಿಬಿಡುತ್ತದೆ. ಮೂರನೆಯ ಬಾರಿ ಆ ಮನುಷ್ಯನು ಮೊದಲನೆಯದಕ್ಕಿಂತ ಕಡಮೆ, ಎರಡನೆಯ ಬಾರಿ ಹಾಕಿದ್ದಕ್ಕಿಂತ ಹೆಚ್ಚು ನೀರನ್ನು ಬಳಸಿ, ಅಕ್ಕಿಯನ್ನು ಸರಿಯಾದ ರೀತಿಯಿಂದ ಹೇಗೆ ಅನ್ನವನ್ನಾಗಿಸಬಹುದೆಂದು ಕಲಿತುಕೊಳ್ಳುತ್ತಾನೆ. ಇಲ್ಲಿ ಅನ್ನ ಮಾಡುವ ಕರ್ಮವು ಮೂರು ಸಾರಿ ಪುನರಾವರ್ತಿತವಾಗಿರುವುದರಿಂದ ಪ್ರತಿ ಪ್ರಯತ್ನದಲ್ಲಿಯೂ ಅನುಭವದ ಮಟ್ಟ ಹೆಚ್ಚುತ್ತಾ ಹೋಗುತ್ತದೆ. ಅದೇ ರೀತಿ ಕರ್ಮದ ಪುನರಾವರ್ತನೆಗಳು ಸರಿಯಾದ ಜ್ಞಾನದೆಡೆಗೆ ನಮ್ಮನ್ನು ನಡೆಸಬಲ್ಲವು.

ಒಬ್ಬ ವ್ಯಕ್ತಿಯು ಮಾಡುವಂಥ ಯಾವುದೇ ಕರ್ಮವು ಅವನ ಮನಸ್ಸಿಗೆ ಸುಖವನ್ನು ಉಂಟುಮಾಡುವ ಗುರಿ ಹೊಂದಿದೆ. ಇನ್ನು ಆ ಮನಸ್ಸು ವೇದವಿರೋಧೀ ಮಾರ್ಗದಿಂದ ಸ್ವಾರ್ಥಪರವಾಗಿ ಪಾಪಕರ್ಮಗಳನ್ನೇ ಮಾಡಿದಲ್ಲಿ, ಅವನ ಕರ್ಮಾಶಯದಲ್ಲಿ (ಸಂಸ್ಕಾರಗಳು) ದುಷ್ಟಫಲಗಳು ಸಂಗ್ರಹವಾಗುತ್ತ ಹೋಗುತ್ತವೆ. ಹಾಗಿರುವುದರಿಂದಲೇ ವೇದವು ಕರ್ಮಗಳ ಮೇಲೆ ನಿಯಂತ್ರಣವನ್ನು ಹೇಳುತ್ತದೆ; ಸುಖಸಂತೋಷಗಳೇ ಕರ್ಮಫಲಗಳಾಗಿ ಸಿಗಬೇಕಾದರೆ, ಯಾವ ಯಾವ ಕರ್ಮಗಳನ್ನು ಆಚರಿಸಬೇಕು ಎಂಬುದಾಗಿ ವಿಧಿನಿಷೇಧಗಳನ್ನು ಸೂಚಿಸುತ್ತದೆ. ಅದನ್ನೇ ಮಹರ್ಷಿ ಜೈಮಿನಿ ತಮ್ಮ ಪೂರ್ವಮೀಮಾಂಸೆಯಲ್ಲಿ ಪ್ರತಿಪಾದಿಸುತ್ತಾರೆ. **'ಸ್ವರ್ಗಕಾಮೋ ಯಜೇತ'** – 'ಯಾರಿಗೆ ಸ್ವರ್ಗವು ಅವಶ್ಯಕವೋ ಅವರು ಸೋಮಯಾಗವನ್ನು ಮಾಡಬೇಕು' ಮುಂತಾದ ಸೂತ್ರಗಳಿಂದ ಕರ್ಮವಿವರಗಳ ವ್ಯಾಪ್ತಿಯು ಯಾವ ಮಟ್ಟಕ್ಕೆ ತಲುಪಿತೆಂದರೆ ಯಾವುದಾದರೂ ಒಬ್ಬ ವ್ಯಕ್ತಿಯು ಮಾಡಿದ, ಮಾಡುತ್ತಿರುವಂತಹ ಹಾಗೂ ಮುಂದೆ ಮಾಡಲಿರುವ ಕರ್ಮಗಳಿಗೆ ಅನಿವಾರ್ಯವಾಗಿ ಇಂಥವೇ ಫಲಗಳು ಸಿಕ್ಕೇ ತೀರುತ್ತವೆಯೆಂದು ಈ ದರ್ಶನದಲ್ಲಿ ಮೊದಲೇ ನಿರ್ಧರಿಸಿಬಿಟ್ಟಿದ್ದಾರೆ. ಹೀಗಿರುವಾಗ ಪರಮಾತ್ಮನ ಅಸ್ತಿತ್ವದ ಆವಶ್ಯಕತೆಯೇ ಇಲ್ಲವಲ್ಲ ಎನ್ನುವವರೂ ಇದ್ದಾರೆ. ಯಾರಿಗೆ ಸುಖ, ಸಂತೋಷ, ಆನಂದಗಳು ಬೇಕೋ, ಸುಭಿಕ್ಷ ಸಂತಾನ ಐಶ್ವರ್ಯ ಬೇಕೋ ಅಂಥವರು ಧಾತ್ರೀಹವನ, ಪುತ್ರಕಾಮೇಷ್ಟಿ, ರಾಜಸೂಯ, ಅಶ್ವಮೇಧಾದಿ ಯಜ್ಞಗಳನ್ನು ಮಾಡಿಕೊಂಡು ಪರಮಾತ್ಮನನ್ನು ನಿರಾಕರಿಸಿಯೂ ಸುಖವಾಗಿರಬಹುದಲ್ಲಾ – ಈ ಮಟ್ಟಕ್ಕೂ ಈ ಕರ್ಮಠರು ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ವಾದ ಮಾಡಿದ್ದಿದೆ. ಇದು ನಿಜವಾಗಲೂ ಅತಿರೇಕವೇ ಸರಿ.

ಪೂರ್ವಮೀಮಾಂಸಾ ದರ್ಶನದ ರಚನಕಾರರಾದ ಜೈಮಿನಿ ಮಹರ್ಷಿಗಳ, ೨೭೩೬ ಸೂತ್ರಗಳಿಗೆ ಶಬರಸ್ವಾಮಿಯು ಭಾಷ್ಯವನ್ನು ಬರೆದಿದ್ದಾರೆ. ಅದು ಶಾಬರಭಾಷ್ಯವೆಂದೇ ಪ್ರಸಿದ್ಧವಾಗಿದೆ. ಈ ಶಾಬರಭಾಷ್ಯಕ್ಕೆ ಇಪ್ಪತ್ತನೆಯ ಶತಮಾನದ ಆರ್ಯಸಮಾಜದ ವಿದ್ವಾಂಸರಾದ ಯುಧಿಷ್ಠಿರ ಮೀಮಾಂಸಕರು ಹಿಂದೀ ಭಾಷೆಯಲ್ಲಿ ಭಾಷ್ಯವನ್ನು ಬರೆದಿರುತ್ತಾರೆ. ಇದಕ್ಕಿಂತ ಪ್ರಾಚೀನ ಕಾಲದಲ್ಲಿಯೇ ಈ ಶಾಬರಭಾಷ್ಯದ ಮೇಲೆಯೇ ಪ್ರಭಾಕರಮಿಶ್ರ ಎಂಬ ಪ್ರಖ್ಯಾತ ವಿದ್ವಾಂಸರು 'ಬೃಹತೀ' ಎಂಬ ಟೀಕೆಯನ್ನು ಬರೆದಿದ್ದಾರೆ. ಈ ಬೃಹತೀ ಎಂಬ ಟೀಕೆಯ ಮೇಲೆ ಶ್ರೀ ಶಾಲಿಕನಾಥ ಎಂಬ ವಿದ್ವಾಂಸರು 'ಋಜು ವಿಮಲಾ' ಎಂಬ ಟೀಕೆಯನ್ನು ಬರೆದಿದ್ದಾರೆ. ಈ ಶಾಬರಭಾಷ್ಯದ ಮೇಲೆ ಶ್ರೀ ಕುಮಾರಿಲ ಭಟ್ಟರೆಂಬ ಪ್ರಸಿದ್ಧ ವಿದ್ವಾಂಸರು ಮೂರು ವಿಸ್ತೃತ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳು **ಶ್ಲೋಕವಾರ್ತಿಕ, ತಂತ್ರವಾರ್ತಿಕ ಹಾಗೂ ಟುಪ್‌ಟೀಕಾ** ಎಂದು ಪ್ರಸಿದ್ಧವಾಗಿವೆ. ಶ್ರೀ ಪಾರ್ಥಸಾರಥಿಮಿಶ್ರ ಎಂಬ ವಿದ್ವಾಂಸರು ಕುಮಾರಿಲ ಭಟ್ಟರ ಶ್ಲೋಕವಾರ್ತಿಕದ ಮೇಲೆ ನ್ಯಾಯ ರತ್ನಾಕರ ಎಂಬ ಭಾಷ್ಯವನ್ನು ಬರೆದಿದ್ದಾರೆ. ಅವರೇ ಬರೆದಿರುವ ಶಾಸ್ತ್ರದೀಪಿಕಾ ಎಂಬ ಪ್ರಕರಣ ಗ್ರಂಥವು ಬಹಳ ಪ್ರಖ್ಯಾತಿಯನ್ನು ಪಡೆದಿದೆ. ಪೂರ್ವಮೀಮಾಂಸಾ ದರ್ಶನದಲ್ಲಿ ಎರಡು ಮತಗಳು ಪ್ರಸಿದ್ಧವಾಗಿವೆ. ಮೊದಲನೆಯದು ಪ್ರಭಾಕರ ಮಿಶ್ರರ **ಗುರುಮತ** ಹಾಗೂ ಎರಡನೆಯದು ಕುಮಾರಿಲ ಭಟ್ಟರ **ಭಾಟ್ಟಮತ**. ಸಾಂಪ್ರದಾಯಿಕರು ಹೇಳುವಂತೆ ಪ್ರಭಾಕರಮಿಶ್ರರು ಕುಮಾರಿಲ ಭಟ್ಟರ ಶಿಷ್ಯರಾಗಿದ್ದರು. ತಮ್ಮ ಶಿಷ್ಯ ಬಹಳ ಪ್ರಖರಜ್ಞಾನಿಯಾಗಿದ್ದುದರಿಂದ ಗುರುವಾದ ಕುಮಾರಿಲ ಭಟ್ಟರೇ ಶಿಷ್ಯನನ್ನು ಗುರುವೆಂದು ಗೌರವಿಸುತ್ತಿದ್ದರು. ಆದರೆ ಕೆಲವು ಆಧುನಿಕ ವಿದ್ವಾಂಸರ ಪ್ರಕಾರ ಪ್ರಭಾಕರ ಮತವು ಭಾಟ್ಟಮತಕ್ಕಿಂತ ಹೆಚ್ಚು ಪ್ರಾಚೀನವಾದುದು. ಹೀಗೆ ಹೇಳುವವರಲ್ಲಿ ಡಾ. ರಂಗನಾಥ ಝಾ ಸಹ ಒಬ್ಬರು.

**ಪೂರ್ವಮೀಮಾಂಸಾ ದರ್ಶನದ ಜ್ಞಾನಮೀಮಾಂಸೆ**

ಜೈಮಿನಿಯ ಅಭಿಪ್ರಾಯದಂತೆ **ಪ್ರತ್ಯಕ್ಷ, ಅನುಮಾನ** ಹಾಗೂ **ಶಬ್ದ** ಎಂಬ ಮೂರು ಪ್ರಮಾಣಗಳಿವೆ. ಆದರೆ ಭಾಷ್ಯಕಾರರಲ್ಲಿ ಪ್ರಭಾಕರ ಮಿಶ್ರರು **ಉಪಮಾನ** ಹಾಗೂ **ಅರ್ಥಾಪತ್ತಿ** ಎಂಬ ಎರಡು ಪ್ರಮಾಣಗಳನ್ನು ಸೇರಿಸಿದರು; ಕುಮಾರಿಲ ಭಟ್ಟರು **ಅನುಪಲಬ್ಧಿ** ಎಂಬ ಆರನೆಯ ಪ್ರಮಾಣವನ್ನು ಸಹ ಪುಷ್ಟೀಕರಿಸಿದರು. ಹೀಗಾಗಿ ಈಗ ಪ್ರಚಲಿತವಿರುವ ಪೂರ್ವಮೀಮಾಂಸಾ ದರ್ಶನದಲ್ಲಿ, ೧)ಪ್ರತ್ಯಕ್ಷ ೨) ಅನುಮಾನ ೩) ಉಪಮಾನ ೪) ಶಬ್ದ (ಆಗಮ)

೫) ಅರ್ಥಾಪತ್ತಿ, ಹಾಗೂ ೬) ಅನುಪಲಬ್ಧಿ ಎಂಬ ಆರು ಪ್ರಮಾಣಗಳಿವೆ.

ಪ್ರಭಾಕರಮಿಶ್ರ ಹಾಗೂ ಕುಮಾರಿಲ ಭಟ್ಟ ಇವರ ಅಭಿಪ್ರಾಯದಂತೆ ಆತ್ಮಗಳು ಅನೇಕವಿವೆ. ಈ ಇಬ್ಬರು ವಿದ್ವಾಂಸರೂ ಈ ಆತ್ಮಗಳನ್ನು ನಿತ್ಯ, ಸರ್ವಗತ, ವಿಭು ಹಾಗೂ ವ್ಯಾಪಕ ದ್ರವ್ಯಗಳೆಂದು ಒಪ್ಪಿಕೊಳ್ಳುತ್ತಾರೆ. ಅಷ್ಟೇ ಅಲ್ಲದೆ, ಈ ಆತ್ಮಗಳಲ್ಲಿಯೇ ಜ್ಞಾನವು ಆಶ್ರಯ ಪಡೆದಿದೆ ಎಂದೂ ಹೇಳುತ್ತಾರೆ. ಆತ್ಮನು ಜ್ಞಾತೃವೂ, ಕರ್ತೃವೂ, ಭೋಕ್ತೃವೂ ಸಹ ಆಗಿದ್ದಾನೆ. ಆತ್ಮನು ಶರೀರ, ಇಂದ್ರಿಯಗಳು, ಮನಸ್ಸು ಹಾಗೂ ಬುದ್ಧಿಗಳಿಂದ ಬೇರೆಯೇ ಆಗಿದ್ದಾನೆ. ಆತ್ಮನು ಭೋಗಿ; ಶರೀರವು ಭೋಗಾಯತನ. ಇಂದ್ರಿಯಗಳು ಭೋಗಸಾಧನಗಳು; ಬಾಹ್ಯ ಪದಾರ್ಥಗಳು ಮತ್ತು ಮನೋಭಾವಗಳು ಭೋಗದ ವಿಷಯಗಳು.

ಪೂರ್ವಮೀಮಾಂಸಾ ದರ್ಶನವು **ಭ್ರಮಾ** ಎಂದು ಕರೆಯಲಾಗುವ ಭ್ರಾಂತಿಜ್ಞಾನವನ್ನು ಪರಿಗಣನೆಗೆ ತಂದುಕೊಂಡು, ಖ್ಯಾತಿ ಮತ್ತು ಅಖ್ಯಾತಿವಾದಗಳನ್ನು ಪ್ರಸ್ತುತಪಡಿಸುತ್ತದೆ. ಖ್ಯಾತಿವಾದವೆಂದರೆ ಭ್ರಮಾ, ಭ್ರಾಂತಿ ಅಥವಾ ಮಿಥ್ಯಾಜ್ಞಾನದ ವಿವೇಚನೆ. ಅದನ್ನು ಕುಮಾರಿಲ ಭಟ್ಟರು ಸಮರ್ಥಿಸುತ್ತಾರೆ. ಆದರೆ ಪ್ರಭಾಕರಮಿಶ್ರರು ಅಖ್ಯಾತಿವಾದವನ್ನು ಎತ್ತಿ ಹಿಡಿಯುತ್ತಾರೆ. ಅಖ್ಯಾತಿವಾದವೆಂದರೆ ಭ್ರಮೆ, ಭ್ರಾಂತಿ ಇತ್ಯಾದಿಗಳು ಜ್ಞಾನದ ಕೊರತೆ ಅಥವಾ ಅಪೂರ್ಣ ಜ್ಞಾನ ಮಾತ್ರ ಎಂಬ ಸಿದ್ಧಾಂತ. ಪ್ರಭಾಕರ ಮಿಶ್ರರ ಪ್ರಕಾರ ಅಪೂರ್ಣ ಜ್ಞಾನ ಅಥವಾ ಅಜ್ಞಾನವನ್ನು ಸರಿಪಡಿಸಿಕೊಳ್ಳಬೇಕೇ ಹೊರತು, ಜ್ಞಾನವು ಯಾವ ರೀತಿಯಿಂದ ಅಪೂರ್ಣವಾಯಿತು, ಅಜ್ಞಾನ ಹೇಗೆ ಉಂಟಾಯಿತು ಎಂಬ ವಿಚಾರಗಳ ಬಗ್ಗೆ ತಲೆಕೆಡಿಸಿಕೊಳ್ಳಬಾರದು. ಏಕೆಂದರೆ ಅದು ಕತ್ತಲೆಯಲ್ಲಿ ಕಪ್ಪು ಬೆಕ್ಕನ್ನು ಹುಡುಕಿದಂತೆ ಅಸಾಧ್ಯ ಮತ್ತು ಅನವಶ್ಯಕ.

ಪೂರ್ವಮೀಮಾಂಸಾ ದರ್ಶನವು ಬಹುತ್ವವಸ್ತುವಾದವನ್ನು ಪ್ರತಿಪಾದಿಸುತ್ತದೆ. ಅಂದರೆ ಈ ಇಡೀ ವಿಶ್ವದಲ್ಲಿ ಕರ್ಮಬಂಧನಕ್ಕೆ ಒಳಪಟ್ಟಿರುವ ಹಾಗೂ ಕರ್ಮಬಂಧನದಿಂದ ಮುಕ್ತರಾದ ಜೀವಾತ್ಮರು ಹಾಗೂ ಜಡ ಪದಾರ್ಥಗಳು ಬಹುಸಂಖ್ಯೆಯಲ್ಲಿ ಇರುವುದೇ ವಾಸ್ತವ ಪರಮಸತ್ಯ. ಈ ಜಗತ್ತಿನ ಸೃಷ್ಟಿಯೂ ಆಗಿಲ್ಲ, ಪ್ರಳಯವೂ ಆಗಿಲ್ಲ. ಈ ಜಗತ್ತು ಎಂದೆಂದಿಗೂ ಪರಿವರ್ತನೆ ಹೊಂದುತ್ತಿರುತ್ತದೆ. ಹಾಗೆಯೇ ಇದರಲ್ಲಿರುವ ಪದಾರ್ಥಗಳು ಮತ್ತು ಜೀವಿಗಳು ಕೂಡ ಪರಿವರ್ತನೆ ಹೊಂದುತ್ತಿರುತ್ತವೆ. ವೇದವು ಅಪೌರುಷೇಯವೂ ಹೌದು, ನಿತ್ಯವೂ ಹೌದು. ಹಲವಾರು ಪೂರ್ವಮೀಮಾಂಸಾ ದಾರ್ಶನಿಕರು ಈ ವಿಶ್ವಕ್ಕೆ ಒಡೆಯನಾದ ಈಶ್ವರನನ್ನು ಒಪ್ಪುವುದಿಲ್ಲ. ಆದರೆ ಮತ್ತೆ ಕೆಲವು ದಾರ್ಶನಿಕರು, ಉದಾಹರಣೆಗೆ ಶ್ರೀ ಆಪದೇವ, ಶ್ರೀ ಲೌಗಾಕ್ಷೀ ಭಾಸ್ಕರ ಮುಂತಾದವರು, ಅದಲ್ಲದೆ ಕುಮಾರಿಲ ಭಟ್ಟರೂ ಸಹ ಈಶ್ವರನನ್ನು ಒಪ್ಪುತ್ತಾರೆ. ಬಹಳಷ್ಟು ಜನ ಮೀಮಾಂಸಕರು ಪರಮಾಣುವಾದವನ್ನೂ ಒಪ್ಪುತ್ತಾರೆ. ಆದರೆ ಕುಮಾರಿಲ ಭಟ್ಟರ ಪ್ರಕಾರ ಪೂರ್ವಮೀಮಾಂಸೆಯಲ್ಲಿ ಪರಮಾಣುವಾದಕ್ಕೆ ಆಸ್ಪದವಿಲ್ಲ. ಪೂರ್ವಮೀಮಾಂಸಾ ದರ್ಶನದಲ್ಲಿ ಧರ್ಮಜಿಜ್ಞಾಸೆಯ ಆಧಾರದ ಮೇಲೆ ಸ್ವರ್ಗ, ಮೋಕ್ಷ ಮುಂತಾದವುಗಳ ವಿವೇಚನೆಯನ್ನು ಮಾಡಲಾಗಿದೆ. ಪ್ರಭಾಕರಮಿಶ್ರರು ೧) ದ್ರವ್ಯ ೨) ಗುಣ ೩)ಕರ್ಮ ೪) ಸಾಮಾನ್ಯ ೫) ಪರತಂತ್ರತಾ ೬) ಶಕ್ತಿ ೭) ಸಾದೃಶ್ಯ ಹಾಗೂ ೮) ಸಂಖ್ಯಾ ಎಂಬುದಾಗಿ ಎಂಟು ಪದಾರ್ಥಗಳನ್ನು ಒಪ್ಪಿಕೊಳ್ಳುತ್ತಾರೆ. ಈ ಪದಾರ್ಥಗಳ ಇರುವಿಕೆಯ ಆಧಾರದ ಮೇಲೆ ಧರ್ಮಜಿಜ್ಞಾಸೆಯು ನಡೆಯುತ್ತದೆ.

### ಧರ್ಮ ನಿರೂಪಣೆ

ಈ ದರ್ಶನದಲ್ಲಿ ಮುಖ್ಯವಾಗಿ ವಿಶ್ಲೇಷಣೆಗೆ ಒಳಪಟ್ಟಿರುವುದು ಧರ್ಮವೇ (**ಅಥಾತೋ ಧರ್ಮಜಿಜ್ಞಾಸಾ,** ೧:೧:೧.). ಎರಡನೆಯ ಸೂತ್ರದಲ್ಲಿ ಧರ್ಮದ ಲಕ್ಷಣವನ್ನು ಹೇಳಿದೆ (**ಚೋದನಾಲಕ್ಷಣೋऽರ್ಥೋ ಧರ್ಮಃ,** ೧:೧:೨). 'ಚೋದನಾ' ಎಂದರೆ ಕ್ರಿಯಾತ್ಮಕ ವಚನದ ಅಥವಾ ವಿಧಿವಾಕ್ಯದ ಮೂಲಕ ಲಕ್ಷಿತವಾದ ಅರ್ಥ. ಇದು ವೇದಗಳಲ್ಲಿ ಹೇಳಿರುವ ಕರ್ಮಾಂಗಗಳ ವಿಧಿವಾಕ್ಯ. ಧರ್ಮವೆಂದರೆ ವೇದವಿಹಿತವಾದ ಕರ್ಮ. ಪ್ರತಿ ವೇದೋಕ್ತ ಕರ್ಮದಲ್ಲಿಯೂ 'ಅಪೂರ್ವ' ವೆಂಬ ಹೆಸರಿನಿಂದ ಕರೆಸಿಕೊಳ್ಳುವ, ಕರ್ಮಫಲವನ್ನು ಸಿದ್ಧಪಡಿಸಿಕೊಡುವ ಒಂದು ಬಗೆಯ ಶಕ್ತಿ ಇರುತ್ತದೆ. ಆ ಶಕ್ತಿಯು ಕರ್ಮ ಹಾಗೂ ಫಲಗಳ ಮಧ್ಯೆ ಇರುವಂಥದ್ದು. 'ಅಪೂರ್ವ'ವೆಂದು ಕರೆಯಿಸಿಕೊಳ್ಳುವ ಆ ಸಾಮರ್ಥ್ಯವು ಆ ಕರ್ಮವನ್ನು ಮಾಡಬಲ್ಲಂಥ ಕರ್ತೃವಿನಲ್ಲಿ ಇರಬೇಕು. ಕರ್ಮಾನುಸರಣೆಯ ಸಂದರ್ಭದಲ್ಲಿ 'ಅಪೂರ್ವ'ವೇ ಮುಂದೆ ನಿಂತು, ನಿಗದಿಯಾದ ಫಲವು ಸಿದ್ಧಿಸುವಂತೆ ಮಾಡುತ್ತದೆ. ಆದ್ದರಿಂದಲೇ ಪುಣ್ಯಕರ್ಮಗಳಿಂದ ಸುಖ–ಸಂತೋಷಗಳೆಂಬ ಫಲಗಳೂ, ಪಾಪಕರ್ಮಗಳಿಂದ ದುಃಖ–ನೋವು ಮುಂತಾದ ಫಲಗಳೂ ಕರ್ತೃವಿಗೆ ಉಂಟಾಗುತ್ತವೆ.

ಕರ್ಮಗಳಲ್ಲಿ ಮೂರು ಪ್ರಕಾರ. ಮೊದಲನೆಯದು **ಕರ್ತವ್ಯ ಕರ್ಮ**. ಇದು **ನಿತ್ಯ** ಹಾಗೂ **ನೈಮಿತ್ತಿಕ** ಕರ್ಮಗಳೆಂದು ಎರಡು ವಿಧ. ಕರ್ತವ್ಯಕರ್ಮವು ವೇದವಿಹಿತವಾಗಿರುವುದರಿಂದ ಮಾಡಲೇಬೇಕಾದದ್ದು. ನಿತ್ಯಕರ್ಮಗಳೆಂದರೆ, ಸಂಧ್ಯಾವಂದನೆ (ಬ್ರಹ್ಮಯಜ್ಞ). ನೈಮಿತ್ತಿಕ ಕರ್ಮಗಳೆಂದರೆ, ಅಗ್ನಿಹೋತ್ರ, ಬಲಿವೈಶ್ವದೇವ, ಅತಿಥಿಯಜ್ಞ ಮುಂತಾದುವು. ಹಾಗೆಯೇ ಪಿತೃಯಜ್ಞ, ಪರ್ವದಿನಗಳು (ಹಬ್ಬ ಹರಿದಿನಗಳು), ಷೋಡಶ ಸಂಸ್ಕಾರಗಳು ಮುಂತಾದವು. ಕುಮಾರಿಲ ಭಟ್ಟರ ಪ್ರಕಾರ ನಿತ್ಯ ಹಾಗೂ ನೈಮಿತ್ತಿಕ ಕರ್ಮಗಳನ್ನು ಮಾಡುವುದರಿಂದ ಪಾಪ ಕ್ಷಯವಾಗುತ್ತದೆ ಹಾಗೂ ಮಾಡದೆ ಇದ್ದರೆ ಪಾಪವು ಅಂಟಿಕೊಳ್ಳುತ್ತದೆ. ಪ್ರಭಾಕರಮಿಶ್ರರ ಪ್ರಕಾರ ನಿತ್ಯ ನೈಮಿತ್ತಿಕ ಕರ್ಮಗಳು ನಿಷ್ಕಾಮಕರ್ಮಗಳು. ಅವುಗಳ ಆಚರಣೆಯಿಂದ ಚಿತ್ತಶುದ್ಧಿಯೆಂಬ ಸ್ಥಿತಿ ಏರ್ಪಡುತ್ತದೆ. ಮಾಡದಿದ್ದರೆ ಪಾಪ ಉಂಟಾಗುತ್ತದೆ. ಇಚ್ಛಾಪೂರ್ತಿಗಾಗಿ ಮಾಡುವಂಥ ಕಾಮ್ಯಕರ್ಮಗಳನ್ನು ಮಾಡದಿದ್ದರೂ ದೋಷವಿಲ್ಲ, ಮಾಡಿದರೆ ಫಲವುಂಟು. **ಪ್ರತಿಷಿದ್ಧ ಕರ್ಮಗಳು** ಮೂರನೆಯ ಪ್ರಕಾರದ ಕರ್ಮಗಳು. ಈ ಕರ್ಮಗಳನ್ನು ಅಶುಭವೆಂದೂ, ಮಾಡಕೂಡದೆಂದೂ ವೇದಗಳು ಹೇಳುತ್ತವೆ. ಇದರಿಂದ ಪಾಪಸಂಚಯನವಾಗುತ್ತದೆ. ಆಶ್ವಲಾಯನ, ಆಪಸ್ತಂಭ, ಬೋಧಾಯನ ಧರ್ಮಸೂತ್ರಗಳು ಹಾಗೂ ಕೆಲವು ಶ್ರುತಿಗಳ ಪ್ರಕಾರ ನಾಲ್ಕನೆಯ ಪ್ರಕಾರದ ಕರ್ಮವೂ ಒಂದಿದೆ. ಅವುಗಳಿಗೆ **ಪ್ರಾಯಶ್ಚಿತ್ತ ಕರ್ಮ**ಗಳೆಂದು ಹೆಸರು. ಹಲವಾರು ಬಾರಿ ಮನುಷ್ಯನು